(ಈ) ರಾಜ್ಯದಲ್ಲಿ ಇನ್ನೂ ಏಕೋಪಾಧ್ಯಾಯ ಶಾಲೆಗಳಾಗಿ ಮುಂದುವರಿಯುತ್ತಿರುವ ಶಾಲೆಗಳ ಒಟ್ಟು ಸಂಖ್ಯೆ ಎಷ್ಟು ?

(ಉ) ಸದರಿ ಶಾಲೆಗಳಿಗೆ ಅಧ್ಯಾಪಕರನ್ನು ನೇಮಿಸುವುದರಲ್ಲಿ ವಿಳಂಬವೇಕೆ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಂಸ್ಕರ ಶಿಕ್ಷಣ ರಾಜ್ಯ ಸಚಿವರು).

(ಅ) ಹೌದು.

(ಆ) ೨೩೦೦ ಏಕೋಪಾಧ್ಯಾಯ ಶಾಲೆಗಳಿಗೆ ಇನ್ನೊಬ್ಬ ಶಿಕ್ಷಕರನ್ನು ನೇಮಕ ಮಾಡಲಾಗಿದೆ.

(ಇ) ಏಕೋಪಾಧ್ಯಾಯ ಶಾಲೆಗಳು	...	೨೪೯
ನೇಮಿಸಿರುವ ಹೆಚ್ಚಿನ ಶಿಕ್ಷಕರು	...	೬೬

(ಈ) ೧೬,೯೭೭

(ಉ) ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಹೆಚ್ಚಿಗೆ ನೇಮಿಸಲಾಗುವುದು.

ಸವದತ್ತಿ ತಾಲ್ಲೂಕಿನಲ್ಲಿ ಒಣ ಬೇಸಾಯ ಅಭಿವೃದ್ಧಿ ಯೋಜನೆಯ ಬಗ್ಗೆ

೧೧೩೮. ಶ್ರೀ ಚಂದ್ರಶೇಖರ ಮಾಮನಿ (ಪರಸಗಡ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಸವದತ್ತಿ ತಾಲ್ಲೂಕಿನಲ್ಲಿ ಒಣ ಬೇಸಾಯ ಅಭಿವೃದ್ಧಿ ಯೋಜನೆಯನ್ನು ಅಳವಡಿಸಲಾಗಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಸಚಿವರು).—

(ಅ) ಹೌದು.

ತಾಲ್ಲೂಕು ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ

೧೦೫೩. ಶ್ರೀ ಜಿ. ರಾಮುದಾಸ್ (ಹೊಸದುರ್ಗ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿರುವ ತಾಲ್ಲೂಕು ಸಾರ್ವಜನಿಕ ಗ್ರಂಥಾಲಯಗಳನ್ನು ಸುಧಾರಣೆಗೊಳಿಸಲಾಗುವುದೆ ?

(ಆ) ಹಾಗಿದ್ದಲ್ಲಿ ಹೊಸದುರ್ಗ ಗ್ರಂಥಾಲಯದಲ್ಲಿ ಪುಸ್ತಕಗಳ ಕೊರತೆ ಇರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಕೂಡಲೇ ಇಲ್ಲಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುವುದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಹೌದು.

(ಆ) ಇಲ್ಲ.

(ಇ) ಮೇಲಿನ ಗ್ರಂಥಾಲಯಕ್ಕೆ ಈಗ ಒದಗಿಸಿರುವ ಗ್ರಂಥಾಲಯ ಸೌಲಭ್ಯ ತೃಪ್ತಿಕರವಾಗಿದೆ.